ಅ) ಒಟ್ಟು 208 ಎಂ.ವಿ.ಎ. (ಮೆಗಾ ವೋಲ್ಟಿ ಆಂಪಿಯರ್)ಗಳೆಂದು ಅಂದಾಜು ಮಾಡಿದೆ.

ಆ) ಈ ಬೇಡಿಕೆಯ ಬಹುಭಾಗವನ್ನು ವಿದ್ಯುಚ್ಛಕ್ತಿ ಮಂಡಲಿಯೇ ಪೂರೈಸುತ್ತಿದೆ. 500 ಕೆ.ವಿ.ಎ. ಮೇಲ್ಪಟ್ಟು ಬೇಡಿಕೆ ಇರುವ ಕೈಗಾರಿಕೆಗಳು ಒಟ್ಟು ಬೇಡಿಕೆಯ $\frac{1}{3}$ ಭಾಗವನ್ನು ಕ್ಯಾಪ್ಟಿವ್ ಜನರೇಷನ್ ಮೂಲಕ ಉತ್ಪಾದಿಸಬೇಕೆಂಬ ಶರತ್ತು ಹಾಕಲಾಗಿದೆ. ಅಲ್ಲದೆ ಖಾಸಗಿ ವಲಯದಲ್ಲಿ ನಿರೀಕ್ಷಿಸಿರುವ ವಿದ್ಯುತ್ ಉತ್ಪಾದನೆ ಕೂಡ ಮುಂಬರುವ ವರ್ಷಗಳಲ್ಲಿ ಮಂಡಳಿಗೆ ಲಭ್ಯವಿರುತ್ತದೆ.

ಬೆಳಗಾಂವ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಹೊಳಿನಾಗಲಾಪೂರ ಗ್ರಾಮದ ಸ್ಥಳಾಂತರ

550 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಹೊಳಿನಾಗಲಾಪೂರ ಗ್ರಾಮವನ್ನು ಸ್ಥಳಾಂತರಿಸಲು ಸರ್ಕಾರಕ್ಕೆ ಮನವಿಗಳು ಬಂದಿವೆಯೇ;

ಆ) ಈ ಗ್ರಾಮದ ಸುತ್ತಲೂ ನೀರು ನಿಂತಿದ್ದು ಜನರ ಆರೋಗ್ಯ ಕೆಡುತ್ತಿರುವ ಬಗ್ಗೆ ಹಾಗೂ ಸುರಕ್ಷತೆ ದೃಷ್ಟಿಯಿಂದ ಆ ಗ್ರಾಮದ ಜನರನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದೇ; ಹಾಗಿದ್ದಲ್ಲಿ ಈ ಗ್ರಾಮವನ್ನು ಸ್ಥಳಾಂತರಿಸಲು ಯಾವ ಕ್ರಮ ಕೈಕೊಳ್ಳಲಾಗಿದೆ;

ಇ) ಈಗಾಗಲೇ ಕಂದಾಯ ಅಧಿಕಾರಿಗಳು ಹಾಗೂ ಸ್ಪೆಷಲ್ ಡೆಪ್ಯೂಟಿ ಕಮೀಷನರ್‌ಮಲಪ್ರಭಾ ಪ್ರಾಜೆಕ್ಟ್ ಇವರು ಈ ಗ್ರಾಮಕ್ಕೆ ಭೇಟಿ ಕೊಟ್ಟಿರುವರೇ?

ಶ್ರೀ ಎಸ್. ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಹೌದು

ಆ) ಮಲಪ್ರಭಾ ಜಲಾಶಯದಲ್ಲಿ ಪೂರ್ಣ ನೀರಿನ ಮಟ್ಟ ಸಂಗ್ರಹವಾದಾಗ ಹೊಳಿನಾಗಲಿಪುರದ ಸಮೀಪದಲ್ಲಿರುವ ಹಳ್ಳಗಳಲ್ಲಿ ಸುಮಾರು 400 ರಿಂದ 500 ಮೀ. ಅಂತರದಲ್ಲಿ ಹಿನ್ನೀರು ನಿಲ್ಲುತ್ತದೆ. ಈ ಗ್ರಾಮದ ಪುನರ್ ನಿವೇಶನದ ಅವಶ್ಯಕತೆಯನ್ನು ಪರಿಶೀಲಿಸಲಾಗುತ್ತಿದೆ.

ಇ) ವಿಶೇಷ ಜಿಲ್ಲಾಧಿಕಾರಿಗಳು (ಮಲಪ್ರಭಾ ಯೋಜನೆ) ಇವರು ಭೇಟಿ ನೀಡಿರುವುದಾಗಿ ತಿಳಿದು ಬಂದಿದೆ. ಕಂದಾಯ ಇಲಾಖೆ ಅಧಿಕಾರಿಗಳ ಭೇಟಿ ಬಗ್ಗೆ ಮಾಹಿತಿ ಇಲ್ಲ.

ಸ್ಥಗಿತಗೊಂಡ ಚಿಕ್ಕಬುದನೂರು ನೀರಾವರಿ ಕೆರೆ ಕೆಲಸವನ್ನು ಪ್ರಾರಂಭಿಸುವುದು

551 - ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂವ ಜಿಲ್ಲಾ ಸವದತ್ತಿ ತಾಲ್ಲೂಕಿನ ಚಿಕ್ಕಬುದನೂರ ಕೆರೆ ಕಟ್ಟುವ ಕೆಲಸಕ್ಕೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಯಾವಾಗ ನೀಡಲಾಯಿತು;

ಆ) ಈ ಕೆಲಸಕ್ಕೆ ಇಲ್ಲಿಯವರೆಗೆ ಎಷ್ಟು ಹಣ ವಿಚ್ರ್ಯಾಗಿರುವುದು;

ಇ) ಹಣಕಾಸಿನ ತೊಂದರೆಯಿಂದ ಈ ಕೆಲಸ ಸ್ಥಗಿತಗೊಂಡ ಸಂಗತಿ ನಿಜವೇ;

ಈ) ಈ ಕೆಲಸ ಪ್ರಾರಂಭಿಸಲು ಸರಕಾರದವರು ಕ್ರಮ ಕೈಗೊಳ್ಳವರೇ;